## ಭಾವನೆಗಳಿಗೆ ಬೆಲೆಯಿಲ್ಲ

ಕಲರ್ಸ್ ಕನ್ನಡದ 'ಬಿಗ್‌ಬಾಸ್' ಮನೆಯಿಂದ ಈಚೆಗೆ ಹೊರ ಬಂದ ಚೈತ್ರಾ ಕೊಟ್ಟೂರು ಭಾಷೆಯ ಪ್ರಭುತ್ವ ಸಾಧಿಸಿದ್ದಾರೆ. ಟಾಸ್ಕ್‌ವೊಂದರಲ್ಲಿ ಅವರ ರಂಗಾಭಿನಯ ಕೂಡ ಪ್ರಬುದ್ಧವಾಗಿತ್ತು. ಅವರು ತಾನು 'ನೇರ ನೇರಾ' ಎನ್ನುತ, ಮನಸ್ಸಿನ ಎಲ್ಲ ಭಾವನೆಯನ್ನು ಮುಕ್ತವಾಗಿ ಹೊರಗೆ ಹಾಕುತ್ತಾ ಹೋದಾಗ ಸಹವಾಸಿಗಳಿಗೆ ಗೊಂದಲ ಉಂಟಾಯಿತು. ಏಕೆಂದರೆ ಮನಸ್ಸು ಚಂಚಲವಾಗಿರುತ್ತದೆ. ಮುಕ್ತವಾಗಿ ಮಾತಾನಾಡುವ ಎನ್ನುವ ವ್ಯಕ್ತಿ ಎಲ್ಲವನ್ನೂ ಹೇಳಿಬಿಡಬೇಕು ಎನ್ನುವ ಹಪಹಪಿಗೆ ಒಳಗಾಗಿರುತ್ತಾನೆ. ಚೈತ್ರಾ ಪದೇ ಪದೇ ಹೇಳುತ್ತಿದ್ದ ಮಾತು.. 'ಎಲ್ಲರೂ ನನ್ನ ಬಳಿ ಬರುತ್ತಿಲ್ಲ, ನನ್ನ ಯಾರೂ ಅರ್ಥ ಮಾಡಿಕೊಳ್ಳುತ್ತಿಲ್ಲ' ಈ ಮಾತು ಕೇವಲ ಬಿಗ್‌ಬಾಸ್‌ನಲ್ಲಿ ಅಲ್ಲ ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಎಲ್ಲಿಯೂ ಸಲ್ಲುವುದಿಲ್ಲ. ಪ್ರತಿಯೊಬ್ಬರೂ ಗೆಲ್ಲಲೇಬೇಕೆಂದು ಆಡುವಾಗ ಭಾವನೆಗಳನ್ನು ಅರ್ಥೈಸಿಕೊಳ್ಳುವುದಕ್ಕೆ ಯಾರಿಗೂ ಸಮಯವಿರುವುದಿಲ್ಲ.

–ಗೌರಿಹಳ್ಳಿ ಮಂಜುನಾಥ, ಹಗರಿಬೊಮ್ಮನಹಳ್ಳಿ

ಇದು ಪ್ರಪಂಚ: ಚೈತ್ರಾ ಕೊಟ್ಟೂರು ಮನೆಯಿಂದ ಹೊರಬಿದ್ದಮೇಲೆ ಮಿಕ್ಕ ಅಲ್ಲಿನ ಮಂದಿಗೆ ಹಾಲು ಕುಡಿದಷ್ಟು ಸಂತೋಷವಾಗಿರಬೇಕು. ಎಲ್ಲರಂತೆ ಮನೆಯಲ್ಲಿ ಅವರೇ ಇರಬೇಕು, ಆಟವಾಡಬೇಕು, ಎನ್ನುವ ಮನಸ್ಸು ಇತ್ತು. ಅವಳನ್ನು ಎಲ್ಲರೂ ನಾಟಕ ಮಾಡುವವಳು ಎಂದು ಆಡಿಕೊಂಡರು. ಆ ಮನೆಯಲ್ಲಿ ಬೇರೆ ಯಾರು ನಾಟಕ ಆಡುವುದಿಲ್ಲವೇ? ಆಕೆ ಇನ್ನೂ ಮೂರು ನಾಲ್ಕು ವಾರಗಳ ಕಾಲ ಇರಬಹುದಿತ್ತೇನೋ ಎಂಬುದು ನನ್ನ ಅನಿಸಿಕೆ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಮದದ ಆನೆಗೆ ಅಂಕುಶ ಜಾಣರ ಪೆಟ್ಟಿಗೆ

ಆನೆಯ ನಿಯಂತ್ರಣಕ್ಕೆ ಅಂಕುಶದಂತೆ, ಪ್ರತಿರಂಗದಲ್ಲೂ ನಿಯಂತ್ರಿಸುವ ಒಂದು ಶಕ್ತಿ ಇರಬೇಕು. ಇಲ್ಲ ಎಂದರೆ ತಾವು ನಡೆದಿದ್ದೇ ದಾರಿ ಎಂಬ ಅಹಂ ನಿಂದ ಮನರಂಜನೆ ಕೊಡುವ ಧಾರಾವಾಹಿಗಳು ಕಿರಿ ಕಿರಿ ಮಾಡುತ್ತವೆ. ಇಂದು ಸಿನಿಮಾಗಳಿಗೆ ಪತ್ರಿಕೆಗಳಲ್ಲಿನ ವಿಮರ್ಶೆ ಮಾರ್ಗದರ್ಶಿ ಆಗಿದೆ. ಕತೆ– ಕಾದಂಬರಿಗಳ ವಿಮರ್ಶೆಯೂ ಸಾಹಿತ್ಯದ ದೋಷಗಳನ್ನು ತೋರಿಸಿ ಬರಹಗಾರರನ್ನು ತಿದ್ದುತ್ತವೆ. ಇಂದು ಅತ್ಯಂತ ಜನಮೋಹಕವಾಗಿ ಅಬಾಲವೃದ್ಧರನ್ನು ಸದಾ ಹಿಡಿದಿಟ್ಟುಕೊಳ್ಳುವ ಮಾಧ್ಯಮವಾದ ಟೀವಿ ವಾಹಿನಿಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳನ್ನು ವಿಮರ್ಶಿಸಿ ಅವುಗಳನ್ನು ನಿಯಂತ್ರಿಸುವ ಕೆಲಸವನ್ನು ಮಾತ್ರ ಕೆಲಸ ಯಾವ ಪತ್ರಿಕೆಯೂ ಮಾಡುತ್ತಿಲ್ಲ. ಇಂತಹ ಪರ್ವಕಾಲದಲ್ಲಿ 'ಸುಧಾ' ಒಂದು ಪುಟವನ್ನು ಮೀಸಲಿಟ್ಟು ವೀಕ್ಷಕರ ಪತ್ರಗಳಲ್ಲಿ ಒಂದಕ್ಕೆ ಬಹುಮಾನವನ್ನೂ ಕೊಟ್ಟು ವೀಕ್ಷಕರಿಂದಲೇ ಕಾರ್ಯಕ್ರಮಗಳ ಗುಣಮಟ್ಟವನ್ನು ಜಾಲಾಡಿಸುತ್ತಿರುವುದು ಅಭಿನಂದನೀಯ. 'ಜಾಣರ ಪೆಟ್ಟಿಗೆ' ಗಮನಿಸಿ ಕೆಲವು ಧಾರಾವಾಹಿ ತಪ್ಪುಗಳನ್ನು ತಿದ್ದಿಕೊಳ್ಳುವುದು ಸಮಾಧಾನದ ಸಂಗತಿ.

–ಸತ್ಯಬೋಧ ವ್ಯಾಸನಕೆರೆ, ಬೆಂಗಳೂರು

ವಾರದ ಪತ್ರ

## ವೈಚಾರಿಕತೆ ಬಿಟ್ಟು ಮೌಢ್ಯ ಹಿಡಿದು

ಗುಡಿ, ಚರ್ಚ್, ಮಸೀದಿಗಳ ಬಿಟ್ಟು ಹೊರಬನ್ನಿ, ಬಡತನವ ಬುಡಮಟ್ಟ ಕೀಳಬನ್ನಿ, ಮೌಢ್ಯತೆಯ ಮಾರಿಯನ್ನು ಹೊರದೂಡಲೈತನ್ನಿ, ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ' ಎಂದು ರಾಷ್ಟ್ರಕವಿ ಕುವೆಂಪು ಅವರ ಕರೆ. ಆದರೆ ದೂರದರ್ಶನದಲ್ಲಿ ಮುಖ್ಯ ಕಾರ್ಯಕ್ರಮ ಜ್ಯೋತಿಷ್ಯ. ಧಾರಾವಾಹಿಗಳಲ್ಲಿ ಮೂಢನಂಬಿಕೆ, ಕಂದಾಚಾರ, ನಾಗಿಣಿ, ಮೋಹಿನಿಯರ ಅಬ್ಬರ.

ದೂರದರ್ಶನ ಮಕ್ಕಳಿಗಾಗಿ ಏನು ಕೊಡುತ್ತಿದೆ? ಮಕ್ಕಳ ರಿಯಾಲಿಟಿ ಶೋ ಎಂದು ಹೆಸರು. ಆದರೆ ಇದರಲ್ಲಿ ತೀರ್ಪುಗಾರರ ಅತಿಯಾದ ಮಾತು, ಅನವಶ್ಯಕ ನಗು, ನಿರೂಪಕರ ಕೆಟ್ಟ ಹಾಸ್ಯ ಇದೇ ಪ್ರಧಾನವಾಗಿದೆ.

'ಮಕ್ಕಳನ್ನು ಅಸಹಜ ಸ್ಪರ್ಧೆ ಮತ್ತು ಒತ್ತಡಗಳಲ್ಲಿ ಬೆಳೆಸದೇ ಸಹಜ ಪ್ರಕೃತಿಯ ಮಡಿಲಲ್ಲಿ ಬೆಳೆಸಿ. ಗಿಡ, ಮರ, ಹೂವು, ಬಳ್ಳಿ, ಪಶು, ಪಕ್ಷಿ, ಪ್ರಾಣಿಗಳ ಪರಿಚಯದೊಂದಿಗೆ ಬೆಳೆಯಲಿ. ಪ್ರಕೃತಿಯ ಸಹಿಷ್ಣುತೆ, ಸಹನೆಗಳನ್ನು ಗಮನಿಸಲಿ, ಹರಿಯುವ ನೀರು, ಬೀಸುವ ಗಾಳಿ, ನೆಲದ ತಂಪಾದ ಹಸಿರು ಅವರ ಉಸಿರಾಗಲಿ. ಇಂಥಾ ಒಡನಾಟದಲ್ಲಿ ಬೆಳೆದ ಮಕ್ಕಳು ಸಹೃದಯರೂ, ಮನುಷ್ಯ ಪ್ರೀತಿಯುಳ್ಳವರೂ, ಸೃಜನಶೀಲರೂ, ಸನ್ಮಾರ್ಗಿಗಳೂ, ಸಾತ್ವಿಕರೂ ಆಗುತ್ತಾರೆ' ಎಂದು ಮಕ್ಕಳ ಮನೋವಿಜ್ಞಾನಿಗಳು ಹೇಳುತ್ತಾರೆ. ದೂರದರ್ಶನವು ಮಕ್ಕಳಿಗೆ ಇಂತಹ ಅರಿವು ಮೂಡಿಸಲು ಕತೆ, ನಾಟಕ, ಚಿತ್ರಕಲೆ, ಸಂಗೀತ, ಸಾಹಿತ್ಯ, ನೃತ್ಯಗಳ ಕಾರ್ಯಕ್ರಮವನ್ನು ದಿನದಲ್ಲಿ ಅರ್ಧ ಗಂಟೆಯಾದರೂ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಾಕ್ಷಿಯಾಗುತ್ತದೆ. ಶಾಲೆಯಲ್ಲಿ ಗಣಿತ, ವಿಜ್ಞಾನ ಕಲಿಯುವಂತೆ ಇವುಗಳ ಬಗ್ಗೆ ಆಸಕ್ತಿ ಮೂಡುತ್ತದೆ.

–ವೀಣಾ ಶಂಕರ್, ಬೆಂಗಳೂರು

## ಥಟ್ಟಂತ ಹೇಳಿದವರು!

ನಾನಿಂದು ಎತ್ತರದಲ್ಲಿ ನಿಂತಿದ್ದೇನೆ ಎಂದರೆ, ನಾನು ನನ್ನ ಹೆತ್ತವರ ಹೆಗಲ ಮೇಲೆ, ಅಣ್ಣನ, ಅಧ್ಯಾಪಕರ, ವಿಜ್ಞಾನಿಗಳ, ಸಾಹಿತಿಗಳ, ಕಾಳಿದಾಸನಿಂದ ಹಿಡಿದು ಶೇಕ್ಸ್‌ಪಿಯರ್ ತನಕ, ರಾಜ್ ಕುಮಾರ್, ಅಮಿತಾಭ್ ಬಚ್ಚನ್ ಹೀಗೆ ಎಲ್ಲರ ಹೆಗಲಮೇಲೆ ನಿಂತಿದ್ದೇನೆ. ಅಪಾರ ಜ್ಞಾನ ರಾಶಿ ನಮಗಾಗಿ ಬಿಟ್ಟುಹೋದ ಹಿರಿಯರಿಂದಾಗಿ ನಾನು, ನಾನೊಬ್ಬ ಏನೂ ಅಲ್ಲ ಹೀಗೆ ನುಡಿದವರು ನಾ. ಸೋಮೇಶ್ವರ. ಈಚೆಗೆ 'ಚಂದನ'ದಲ್ಲಿ ಅವರ ಸಂದರ್ಶನ ಬಂತು. ಅವರ ಸರಳತೆ, ಸುಲಲಿತ ಸಮೃದ್ಧ ನುಡಿ ಮಂತ್ರಮುಗ್ಧಗೊಳಿಸುತ್ತಲೇ ಬಂದಿದೆ. ಅವರ ಭಾಷಾ ಪ್ರೇಮ, ಪುಸ್ತಕ ಪ್ರೇಮ, ಗುರು ಹಿರಿಯರನ್ನೂ ಗೌರವಿಸುವ ವಿನಮ್ರತೆ ನಮ್ಮನ್ನು ಭಾವುಕರನ್ನಾಗಿಸುತ್ತದೆ.

–ವೀಣಾ ಜೋಶಿ, ಬಾರ್ಕೂರು

## ಕೊನೆ ಎಂದು?

ಕಲರ್ಸ್‌ನ 'ಅಗ್ನಿಸಾಕ್ಷಿ'ದಲ್ಲಿ ಚಂದ್ರಿಕಾಳನ್ನು (ಪ್ರಿಯಾಂಕಾ) ಜೈಲಿಗೆ ಕಳಿಸಿದ್ದಾಯಿತು. ಆಕೆ 'ಬಿಗ್‌ಬಾಸ್' ಮನೆಗೆ ಹೋಗಿರದಿದ್ದರೆ ಬಹುಶಃ ಅವಳು ಇನ್ನೂ ಜೈಲಿಗೆ ಹೋಗುತ್ತಿರಲಿಲ್ಲವೇನೋ? ಚಂದ್ರಿಕಾ ಜೈಲಿಗೆ ಹೋದ ಮೇಲೆ ಈ ಧಾರಾವಾಹಿ ಮುಗಿದು ಬಿಡಬಹುದೇನೋ ಎಂದು ಕಾಯುತ್ತಿದ್ದ ವೀಕ್ಷಕರಿಗೆ ನಿರಾಸೆಯೇ ಕಾದಿದೆ. ಅದು ಮುಗಿಯುವ ಲಕ್ಷಣಗಳು ಸದ್ಯಕ್ಕೆ ಗೋಚರಿಸುತ್ತಿಲ್ಲ. ಬದಲಾಗಿ ಮಾಯಾಳ ಮೂಲಕ ಮನೆಯಲ್ಲಿ ರಾದ್ಧಾಂತ ಉಂಟು ಮಾಡುವ ಲಕ್ಷಣಗಳು ಗೋಚರಿಸುತ್ತಿವೆ.

ಇದರಲ್ಲಿ ವಾಸುದೇವನ ಕುಟುಂಬದವರಿಗೆ ಕೆಲವು ರೋಗಗಳಿವೆ. ಸಾಮಾನ್ಯ ವಿಷಯಗಳನ್ನು ಇನ್ನಷ್ಟು ಜಟಿಲಗೊಳಿಸುತ್ತಾರೆ. ಇನ್ನೊಬ್ಬರಿಗಾಗಿ ತ್ಯಾಗ ಮಾಡಲು ಹೋಗಿ ತಾವೇ ತೊಂದರೆಗೆ ಸಿಲುಕಿಕೊಳ್ಳುವುದು. ಇಲ್ಲದ ಸಮಸ್ಯೆಗಳನ್ನು ಮೈಮೇಲೆ ಎಳೆದುಕೊಳ್ಳುವುದು. ಇನ್ನೊಬ್ಬರನ್ನು ಯಾವಾಗಲೂ ಸಂಶಯದಿಂದ ನೋಡುವುದು. ಇವರ ಈ ಗುಣಗಳಿಂದಾಗಿ ಎಷ್ಟು ದಿವಸ ಬೇಕಾದರೂ ಎಳೆದಾಡಬಹುದು. ಅತ್ತ ಸಿತಾರಾದೇವಿ ಪಾತ್ರಧಾರಿ ಬಿಗ್‌ಬಾಸ್ ಮನೆ ಸೇರಿರುವುದರಿಂದ 'ರಾಧಾರಮಣ' ನಿಲ್ಲಿಸಲಾಗಿದೆ. ಅಂತೆಯೇ 'ಅಗ್ನಿಸಾಕ್ಷಿ' ನಿಲ್ಲಲ್ಲಿ ಎನ್ನುವ ಆಶಯ.

–ಮುರಲೀಧರ ಕುಲಕರ್ಣಿ, ಬೀದರ್

## ಸ್ಫೂರ್ತಿ ರೂಪಿ

ಕಲರ್ಸ್ ಕನ್ನಡದ 'ಕೋಟ್ಯಧಿಪತಿ' ಒದಿನ ಜೊತೆಗೆ ನಮಗೆ ಸಾಮಾನ್ಯ ಜ್ಞಾನವಿದ್ದರೆ ಅದರ ಜೊತೆಗೆ ಕಾರ್ಯಕ್ರಮದಲ್ಲಿ ಯಶಸ್ವಿಯಾಗಿ ಭಾಗವಹಿಸುವ ಅದೃಷ್ಟವಿದ್ದರೆ ಒಬ್ಬ ಸಾಮಾನ್ಯ ಮನುಷ್ಯ ಕೋಟಿ ರೂಪಾಯಿ ಗೆಲ್ಲಬಹುದು ಎಂಬುದಕ್ಕೆ ಸಾಕ್ಷಿಯಾದ ಕಾರ್ಯಕ್ರಮ ಪುನೀತ್‌ರಾಜ್ ಅವರು ತಮ್ಮ ಅರ್ಥಪೂರ್ಣ ನಿರೂಪಣೆ ಹಾಗೂ ಲವಲವಿಕೆಯಿಂದ ಕಾರ್ಯಕ್ರಮ ಕಳೆ ಕಟ್ಟಲು ಸಹಕಾರಿಯಾಗಿದ್ದಾರೆ. ಎಲ್ಲ ವಯೋಮಾನದ ಜನರೊಂದಿಗೆ ಅವರ ವೃತ್ತಿ ಜೀವನ, ಅವರ ಸಾಧನೆ, ಅವರ ಸಾಮಾಜಿಕ ಕಳಕಳಿಯನ್ನು ಅವರ ಮಾತಿನಲ್ಲಿಯೇ ಕೇಳಿ ಅದು ಮತ್ತೊಬ್ಬರ ಬಾಳಿಗೆ ಸ್ಫೂರ್ತಿ ನೀಡುವ ರೀತಿಯಲ್ಲಿ ಯಶಸ್ವಿಯಾಗುತ್ತಿದೆ.

–ಕುಬೇರಪ್ಪ ಎಂ. ವಿಭೂತಿ, ಹರಿಹರ